# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಶಾಸನಬದ್ಧ ಸಹಕಾರಿ ಸಂಸ್ಥೆ

"ನಿರ್ಮಾಣ ಭವನ", ಡಾ. ರಾಜಕುಮಾರ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010

Ph: 080-23378375-80 Website: www.souharda.coop E-Mail: souharda@souharda.coop


ಕ್ರ.ಸಂ,1 /ಸೇ.ವಿ/ /19–20 ದಿನಾಂಕ: 05–03–2020

ಇವರಿಗೆ,

ಇ–ಸ್ಟಾಂಪ್ ಎಸಿಸಿಗಳನ್ನು ಹೊಂದಿರುವ ರಾಜ್ಯದ

ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ,

**ವಿಷಯ : ಕಮಿಷನ್ ಪಡೆಯಲು ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಜಿ.ಎಸ್.ಟಿ ಇನ್‌ವಾಯ್ಸ್ ಅಥವಾ ಸಪ್ಲೈ ಇನ್‌ವಾಯ್ಸ್ ನೀಡಬೇಕಿರುವ ಕುರಿತು,**

ಮಾನ್ಯರೇ,

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸ್ಟಾಕ್ ಹೋಲ್ಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿ., ನಿಂದ ಸ್ವೀಕರಿಸಿದ ಕಮಿಷನ್ ಮೊತ್ತವನ್ನು ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳಿಗೆ ಮೂಲದಲ್ಲಿ ತೆರಿಗೆ ಕಟಾಯಿಸಿ ವಿತರಿಸುತ್ತಿತ್ತು. ಸಂಯುಕ್ತ ಸಹಕಾರಿಯು ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯಾದ ನಂತರ, ಸದಸ್ಯ ಸಹಕಾರಿಗಳಿಂದ ಜಿ.ಎಸ್.ಟಿ ಇನ್‌ವಾಯ್ಸ್ ಪಡೆದು ಕಮಿಷನ್ ವಿತರಿಸುವಂತೆ ಸಂಯುಕ್ತ ಸಹಕಾರಿಯ ಜಿ.ಎಸ್.ಟಿ ಸಲಹೆಗಾರರು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯಾದ ಸಹಕಾರಿಗಳು ತಮ್ಮ ಲೆಕ್ಕಪರಿಶೋಧಕರಿಂದ ಸಲಹೆ ಪಡೆದು, ಸಂಯುಕ್ತ ಸಹಕಾರಿಗೆ ಜಿ.ಎಸ್.ಟಿ ಇನ್‌ವಾಯ್ಸ್ ನೀಡುವುದು, ಇನ್ನೂ ಸಂಯುಕ್ತ ಸಹಕಾರಿಗೆ ಜಿ.ಎಸ್.ಟಿ ಇನ್‌ವಾಯ್ಸ್ ನೀಡಿದ ಸಹಕಾರಿಗಳು ದಿನಾಂಕ 20 ಮಾರ್ಚ್ 2020 ರೊಳಗೆ ಜಿ.ಎಸ್.ಟಿ ಮೊತ್ತವನ್ನು ಪಾವತಿಸಲು ಸೂಚಿಸಿದೆ. **ಸಂಯುಕ್ತ ಸಹಕಾರಿಯ ಜಿ.ಎಸ್.ಟಿ ಸಂಖ್ಯೆ: 29AAAJK0364R1ZN ಆಗಿರುತ್ತದೆ.** ಜಿ.ಎಸ್.ಟಿ ಮೊತ್ತವನ್ನು ಪಾವತಿಸಿದ ನೋಂದಾಯಿತ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಇನ್‌ವಾಯ್ಸ್ ನೀಡುವ ಮೂಲಕ ತಾವು ಪಾವತಿಸಿದ ಜಿ.ಎಸ್.ಟಿ ಮೊತ್ತವನ್ನು ಹಿಂಪಡೆಯಬಹುದಾಗಿರುತ್ತದೆ. ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯಾಗಿರದ ಸಹಕಾರಿಗಳು ಸಪ್ಲೈ ಇನ್‌ವಾಯ್ಸ್ ನೀಡುವುದು. ಸಪ್ಲೈ ಇನ್‌ವಾಯ್ಸ್ ನೀಡುವ ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯಾಗಿರದ ಸಹಕಾರಿಗಳ ಭಾಗದ ಕಮಿಷನ್‌ನಲ್ಲಿನ ಜಿ.ಎಸ್.ಟಿ ಭಾಗದ ಮೊತ್ತವನ್ನು ಸಂಯುಕ್ತ ಸಹಕಾರಿ ಪಾವತಿಸಬೇಕಿರುವ ಕಾರಣ, ಅಂತಹ ಸಹಕಾರಿಗಳಿಗೆ ಜಿ.ಎಸ್.ಟಿ ಕಡಿತವಾದ ನಂತರ ಉಳಿದ ಕಮಿಷನ್ ಮೊತ್ತವನ್ನು ಅವರ ಟ್ರೇಡಿಂಗ್ ಖಾತೆಗೆ ಜಮಾ ಮಾಡಲಾಗುವುದು. ಜಿ.ಎಸ್.ಟಿ ಕಾಯ್ದೆಯಡಿ ನೋಂದಣಿಯಾಗಿರದ ಸಹಕಾರಿಗಳನ್ನು ನೋಂದಣಿ ಮಾಡಿಕೊಳ್ಳಲು ಸೂಚಿಸಿದೆ.

ಸೂಚನೆ: ಸಹಕಾರಿಗಳಿಗೆ ಸಂಬಂಧಪಟ್ಟ ಜಿ.ಎಸ್.ಟಿ ಇನ್‌ವಾಯ್ಸ್ ಅಥವಾ ಸಪ್ಲೈ ಇನ್‌ವಾಯ್ಸ್ ನೀಡದ ಹೊರತು, ಕಮಿಷನ್‌ನನ್ನು ತಮ್ಮ ಖಾತೆಗೆ ವರ್ಗಾಯಿಸಲು ಸಾಧ್ಯವಿಲ್ಲ.

Karnataka State Souharda Federal Co-operative Ltd., Service Division Bengaluru

ಸಹಿ/–
(ಅನಿತಾ.ಎಸ್)
ಕಿರಿಯ ವ್ಯವಸ್ಥಾಪಕಿ